**ಸಾಕ್ಷಿಯನ್ನು ದಿನಾಂಕ 05-01-2026 ರಂದು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು**.

**ಪಾಟೀ ಸವಾಲುಃ ಪ್ರತಿವಾದಿಯರ ಪರ ಶ್ರೀ ಎ.ಎನ್.ಎಸ್ ವಕೀಲರಿಂದಃ**

1. ಈ ದಾವೆಯ ವಾದಿ–ಪ್ರತಿವಾದಿಯರು ನನ್ನ ಪರಿಚಯಸ್ಥರು. ಈಗ ನನಗೆ 54 ವರ್ಷ ವಯಸ್ಸಾಗಿದೆ. ವಾದಿಯರು ನನಗೆ 50 ವರ್ಷಗಳಿಂದ ಪರಿಚಯವಿದ್ದಾರೆ ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಬರೆಸಿಲ್ಲಾ. ಸಾಕ್ಷಿ ಪುನಃ ನಾನು ಹುಟ್ಟಿದ್ದಾಗಿನಿಂದ ಅವರು ನನಗೆ ಪರಿಚಯವಿದ್ದಾರೆ ಎನ್ನುತ್ತಾರೆ. ವಾದಿ–ಪ್ರತಿವಾದಿಯರ ಮನೆ ಅಕ್ಕ–ಪಕ್ಕದಲ್ಲಿದೆ ಎಂದರೆ ಸರಿ. ವಾದಿಯರು 15 ½ x30 ಅಡಿ ವಿಸ್ತೀರ್ಣದ ಮನೆ ಕಟ್ಟಿದ್ದಾರೆ. ಸದರಿ ಮನೆ ವಾದಿಯರ ತಂದೆಯದ್ದು ಎಂದರೆ ಸರಿ. ವಾದಿಯರ ತಂದೆಗೆ ಇಬ್ಬರು ಗಂಡು ಮತ್ತು 4 ಜನ ಹೆಣ್ಣು ಮಕ್ಕಳು. ಮನೆಯ ಖಾತೆ ಪೌತಿ ಆಧಾರದ ಮೇಲೆ ವಾದಿಯರ ಹೆಸರಿಗೆ ಬದಲಾವಣೆ ಆಗಿದೆಯೋ ಇಲ್ಲವೊ ನನಗೆ ಗೊತ್ತಿಲ್ಲ.

2. ವಾದಿಯರ ಮನೆಯ ಪಕ್ಕದಲ್ಲೇ ಪ್ರತಿವಾದಿಯರ ಮನೆ ಇದೆ ಎಂದರೆ ಸರಿ. ಪ್ರತಿವಾದಿಯರ ಮನೆಯ ಹಿಂಭಾಗದಲ್ಲಿ ವಾದಿಯರು ಮನೆ ಕಟ್ಟುದಿದ್ದಾರೆ ಎಂದರೆ ಸಾಕ್ಷಿ ಅಲ್ಲಿ 4 ನೇ ಪ್ರತಿವಾದಿ ಶೆಡ್ ಹಾಕಿದ್ದಾರೆ ಮತ್ತು ಅದರಲ್ಲಿ ಯಾರು ವಾಸವಿಲ್ಲ ಎನ್ನುತ್ತಾರೆ. ಪ್ರತಿವಾದಿಯರು ತಮ್ಮ ಮನೆಯ ಹಿಂಭಾಗದಲ್ಲಿ ಈ ದಾವೆ ದಾಖಲಾಗುವ ಸಂದರ್ಭದಲ್ಲಿ ಶೆಡ್ ಕಟ್ಟುತ್ತಿದ್ದರು ಎಂದರೆ ಸರಿ. ಆಗ ಪ್ರತಿವಾದಿಯರೇ ಸದರಿ ಶೆಡ್ ಇರುವ ಜಾಗದಲ್ಲಿ

ಸ್ವಾಧೀನ ಇದ್ದರು ಎಂದರೆ ಸರಿ.

3. ವಾದಿಯರ ಮನೆಯ ಹಿಂಭಾಗದಲ್ಲಿರುವ ಹಿತ್ತಲಿನಲ್ಲಿ ತೆಂಗು ಮತ್ತು ಮಾವಿನ ಮರಗಳು ಇವೆ ಎಂದರೆ ಸರಿ. ಸದರಿ ಹಿತ್ತಲಿಗೆ ಸಂಬಂಧಪಟ್ಟ ಇ–ಸ್ವತ್ತು ದಾಖಲೆ ವಾದಿಯರ ಹೆಸರಿಗೆ ಇರುವುದನ್ನು ನಾನು ನೋಡಿಲ್ಲ. ಸಾಕ್ಷಿ ಸ್ವ ಇಚ್ಛೆಯಿಂದ ನಗರ ಸಭೆಯವರು ಅವರ ಹೆಸರಿಗೆ ರೂ.200/– ರಶೀದಿ ಕೊಟ್ಟು ಖಾತೆ ಮಾಡಿದ್ದಾರೆ ಎನ್ನುತ್ತಾರೆ. ಸದರಿ ರಶೀದಿ ಮತ್ತು ಖಾತೆ ದಾಖಲೆಗಳನ್ನು ನೋಡಿದ್ದೇನೆ. ಅದನ್ನು ವಾದಿಯರು ನ್ಯಾಯಾಲಯಕ್ಕೆ ಕೊಟ್ಟಿದ್ದರೋ ಇಲ್ಲವೊ ನನಗೆ ಗೊತ್ತಿಲ್ಲ. ವಾದಿಯರ ಹಿತ್ತಿಲಿನಲ್ಲಿರುವ ತೆಂಗು ಮತ್ತು ಮಾವಿನ ಮರಗಳು ಪ್ರತಿವಾದಿಯರ ಮನೆಯ ಹಿತ್ತಲಿನ ಕಡೆಗೆ ವಾಲಿದ್ದವು ಮತ್ತು ತೆಂಗಿನ ಕಾಯಿ ಮತ್ತು ಗರಿ ಪ್ರತಿವಾದಿಯರು ಕಟ್ಟಿರುವ ಶೆಡಿಗೆ ಬೀಳುತ್ತಿತ್ತು ಎಂದರೆ ಸಾಕ್ಷಿ ಗರಿಗಳು ಬೀಳುತ್ತಿತ್ತು ಮತ್ತು ಕಾಯಿಗಳು ಕೆಳಗೆ ಬೀಳುವ ಮೊದಲೇ ಅಕ್ಕ–ಪಕ್ಕದ ಮನೆಯವರು ಕೀಳುತ್ತಿದ್ದರು ಎನ್ನುತ್ತಾರೆ. ಸದರಿ ಮರಗಳಿಂದ ತೊಂದರೆಯಾಗುತ್ತಿದ್ದ ಕಾರಣ ಅವುಗಳನ್ನು ಕತ್ತರಿಸುವಂತೆ ಪ್ರತಿವಾದಿಯರು ವಾದಿಯರಿಗೆ ಕೇಳಿದ್ದರೂ ಮತ್ತು ಆ ಸಂಬಂಧ ನಗರ ಸಭೆಗೂ ಅರ್ಜಿ ಕೊಟ್ಟಿದ್ದರೂ ಎಂದರೆ ಸರಿ. ನಗರ ಸಭೆಯವರು ಸಹ ಬಾಗಿರುವ ಮರಗಳನ್ನು ಕತ್ತರಿಸುವಂತೆ ವಾದಿಯರಿಗೆ ತಿಳುಹಿಸಿದ್ದರು ಎಂದರೆ ಸರಿ.

4. ವಾದಿಯರು ನಗರ ಸಭೆಯ ಆದೇಶವನ್ನು ಪಾಲಿಸಿಲ್ಲ ಎಂದರೆ ಸಾಕ್ಷಿ ಪಾಲಿಸಿದ್ದಾರೆ, ಆದರೆ ಕೆಲವು ಒಣಗಿದ ರಂಬೆಗಳು ಪ್ರತಿವಾದಿಯರ ಜಾಗಕ್ಕೆ ಬಿದಿದ್ದೆ ಎನ್ನುತ್ತಾರೆ. ವಾದಿಯರು

ನಗರ ಸಭೆಯ ಆದೇಶವನ್ನು ಪಾಲಿಸದೆ ಮತ್ತು ಪ್ರತಿವಾದಿಯರ ಮನವಿಯನ್ನು ಲೆಕ್ಕಿಸದೆ ಇದ್ದ ಕಾರಣ ಹಾಗೂ ಅವರ ಜಾಗದ ಕಡೆ ಬಾಗಿದ ಮರಗಳಿಂದ ತೊಂದರೆ ಆಗುತ್ತಿದ್ದರಿಂದ ಅವರು ವಾದಿಯರ ವಿರುದ್ಧ ಈ ನ್ಯಾಯಾಲಯಕ್ಕೆ ಪ್ರತ್ಯೇಕ ದಾವೆ ಸಲ್ಲಿಸಿದ್ದಾರೆ ಎಂದರೆ ಸಾಕ್ಷಿ ವಾದಿಯರು ಮರಗಳನ್ನು ಕತ್ತರಿಸಿದ್ದಾರೆ ಎನ್ನುತ್ತಾರೆ. ಮರದ ಕೊಂಬೆಗಳನ್ನು ಕತ್ತರಿಸಿ ಎಂದು ಪ್ರತಿವಾದಿಯರು ವಿನಂತಿ ಮಾಡಿದಾಗ ವಾದಿಯರು ಅವರ ಮೇಲೆ ಹಲ್ಲೆ ಮಾಡಿದ್ದರಿಂದ ಅವರ ವಿರುದ್ಧ ಪೊಲೀಸರಿಗೆ ದೂರು ಕೊಡಲಾಗಿದೆ ಎಂದರೆ ಸಾಕ್ಷಿ ಹಲ್ಲೆ ಮಾಡಿಲ್ಲ ಮತ್ತು ಇಬ್ಬರು ಬೈದಾಡಿಕೊಂಡಿದ್ದಾರೆ ಎನ್ನುತ್ತಾರೆ. ಸತ್ಯಾಂಶ ಗೊತ್ತಿದ್ದರೂ ಸಹ ವಾದಿಯರಿಗೆ ಸಹಾಯ ಮಾಡುವ ಸಲುವಾಗಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

5. ವಾದಿಯರ ಹಿತ್ತಲ ಜಾಗದಲ್ಲಿ ಶೌಚಲಯ ಇರುವುದನ್ನು ನಾನು ನೋಡಿದ್ದೇನೆ. ನನ್ನ ಮನೆ 15 ½ x120 ಅಡಿ ವಿಸ್ತೀರ್ಣದಲ್ಲಿದೆ. ನನ್ನ ತಾಯಿಯ ಹೆಸರು ಪುಟ್ಟಮ್ಮ ಮತ್ತು ತಂದೆ ಹಳದಪ್ಪ. ನನ್ನ ಹೆಸರಿಗೆ 15 ½x167 ಅಡಿ ವಿಸ್ತೀರ್ಣದ ದಾಖಲೆ ಇದೆ ಎಂದರೆ ಸರಿಯಲ್ಲ. ವಾದಿಯರೇ ಪ್ರತಿವಾದಿಯರಿಗೆ ತೊಂದರೆ ಕೊಟ್ಟು ಈ ಸುಳ್ಳು ದಾವೆ ದಾಖಲಿಸಿರುವ ವಿಷಯ ನನಗೆ ಗೊತ್ತಿದ್ದರೂ ಸಹ ವಾದಿಯರಿಗೆ ಸಹಾಯ ಮಾಡುವ ಸಲುವಾಗಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿಯರು ವಾದಿಯರ ಆಸ್ತಿಗೆ ಯಾವತ್ತು ತೊಂದರೆ ಕೊಟ್ಟಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಯರು ತಮ್ಮ ಜಾಗ ಕಡಿಮೆ ಇದೆ ಎಂದು ವಾದಿಯ ಜಾಗಕ್ಕೆ ತೊಂದರೆ ಕೊಟ್ಟಿದ್ದರಿಂದ ಈ ದಾವೆ ದಾಖಲಿಸಲಾಗಿದೆ. ಸದರಿ

ವಿಷಯವನ್ನು ನನ್ನ ಪ್ರಮಾಣ ಪತ್ರದಲ್ಲಿ ಬರೆಸಿಲ್ಲ.

**ಮರುವಿಚಾರಣೆಃ ಇಲ್ಲ.**

(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ. ಸರಿ ಇದೆ.

**C/c 1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು,**
**ಭದ್ರಾವತಿ.**